**ಸಾಕ್ಷಿಯನ್ನು ಇಂದು ದಿನಾಂಕಃ 03.08.2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಸಿ.ಟಿ.ವಕೀಲರಿಂದ.**

ನಾನು ಪಿಯುಸಿ 1 ನೇ ವರ್ಷ ಕಲಿತಿರುತ್ತೇನೆ. ಪ್ರತಿವಾದಿಯ ಮನೆಯ ಹತ್ತಿರ ನನ್ನ ಮನೆ ಇರುವುದಿಲ್ಲ. ನನ್ನ ಹೊಲಗಳು ಪ್ರತಿವಾದಿಯ ಹೊಲದ ಸುತ್ತ ಮುತ್ತ ಇರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವವರೆದು ನಾನು ಪ್ರತಿವಾದಿಯ ಹೊಲದ ಹತ್ತಿರ ಪಾಲಿಗೆ ತೆಗೆದುಕೊಂಡು ಬಿತ್ತನೆ ಮಾಡಿರುತ್ತೇನೆ. ನಾನು ಪಾಲಿಗೆ ತೆಗೆದುಕೊಂಡು ಮಾಡಿದ ಹೊಲದ ಸರ್ವೆ ನಂಬರ ಹೇಳಲು ಬರುವುದಿಲ್ಲ. 1 ನೇ ವಾದಿ ಹಾಗೂ ಪ್ರತಿವಾದಿಯ ಮದುವೆಯಾಗಬೇಕಾದರೇ ಅವರದು ಒಂದೇ ಮದುವೆ ಆಗಿರುತ್ತದೆ. 1 ನೇ ವಾದಿ ಹಾಗೂ ಪ್ರತಿವಾದಿಯ ಮದುವೆ ಆದ ಸಮಯದಲ್ಲಿ ಒಟ್ಟು ಮೂರು ಮದುವೆಗಳು ಆಗಿರುತ್ತವೆ, ನಾನು ಮದುವೆಗೆ ಹೋಗದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹೊಲದ ಸರ್ವೆ ನಂಬರ ನನಗೆ ಸರಿಯಾಗಿ ಗೊತ್ತಿಲ್ಲ. ಪ್ರತಿವಾದಿಗೆ 8 ಎಕರೆ ಹೊಲ ಇರುತ್ತದೆ. 1 ನೇ ವಾದಿಗೆ 4 ಮಕ್ಕಳು ಇದ್ದವು. ಮೊದಲನೇ ಮಗ 10 ವರ್ಷದವನಿದ್ದಾಗ ಬಾವಿಗೆ ಬಿದ್ದು ತೀರಿಕೊಂಡಿರುತ್ತಾನೆ. ಈಗ 1 ನೇ ವಾದಿಗೆ 8 ವರ್ಷದ ಮಗ ಇರುತ್ತಾನೆ. ಪ್ರತಿವಾದಿಯ ತಂದೆಯ ಆಸ್ತಿ ಅವನಿಗೆ ಬಂದಿರುತ್ತದೆ. ಪ್ರತಿವಾದಿ ಹೊಲವನ್ನು ಸಾಲ ಪಡೆದುಕೊಂಡು ಖರೀದಿ ಮಾಡಿರುತ್ತಾನೆ ಎಂದರ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ಬ್ಯಾಂಕ ಸಾಲ ತೆಗೆದುಕೊಂಡು ಅಥವಾ ಮನೆಯಿಂದ ದುಡ್ಡು ತೆಗೆದು ಖರಿದಿ ಮಾಡಿರುತ್ತಾರೋ ಎಂದು ಹೇಳುತ್ತಾರೆ. 2005 ರಲ್ಲಿ ಶಿವರಾಯ ತಂದೆ ಬಸವಣ್ಣಪರವರಿಂದ ಪ್ರತಿವಾದಿ ಖರೀದಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಇಂದಿಗೂ ಸಹ ಹೊಲದ ಉತ್ಪನ್ನಗಳಿಂದ ಸಾಲ ತೀರಿಸುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿ 1 ನೇ ವಾದಿಗೆ ಒಂದು ಮೋಟರ ವಾಹನ ಖರೀದಿ ಮಾಡಲು ರೂ.50,000/- ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದ ಎಂದು ಬರೆದಿರುತ್ತದೆ ಎಂದರೆ ಸರಿ. 2009-10 ರಲ್ಲಿ ಪ್ರತಿವಾದಿ 1 ನೇ ವಾದಿಗೆ ಕಿರುಕುಳ ನೀಡಿದ್ದ. ನಾನು 9 ವರ್ಷಗಳ ಕೆಳಗ ಪ್ರತಿವಾದಿಯ ಮನೆಗೆ ಹೋಗುವುದು ಬರುವುದು ಮಾಡುತ್ತಿದ್ದೆ. ನನ್ನ ಹಾಗೂ ಪ್ರತಿವಾದಿಗಳ ಜಾತಿ ಬೇರೆ ಇದ್ದ ಕಾರಣ ಪ್ರತಿವಾದಿಯ ಮನೆಗೆ ಹೋಗುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ಜಾತಿ ಬೇರೆ ಇದದರೂ ನಾನು ಹಾಗೂ ವಾದಿ ಮತ್ತು ಪ್ರತಿವಾದಿಯ ತಂದೆಯರು ಗೆಳೆಯರಿದ್ದ ಕಾರಣ ಮನೆಗೆ ಹೋಗುವುದು ಬರುವುದು ನಡೆಯುತ್ತಿತ್ತು ಎಂದು ಹೇಳುತ್ತಾರೆ. 1 ನೇ ವಾದಿ ತಂದೆ ನನ್ನ ಗೆಳೆಯನಿದ್ದ ಕಾರಣ 1 ನೇ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ನೇ ಹೆಂಡತಿ ಭೂಸನೂರು ಗ್ರಾಮದವರು ಅವರ ತಂದೆ ತಾಯಿಯ ಹೆಸರು ಗೊತ್ತಿರುವುದಿಲ್ಲ. ಪ್ರತಿವಾದಿಯ 2 ನೇ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ 2 ನೇ ಮದುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರಿಗೆ 2 ಗಂಡು ಮಕ್ಕಳು ಇರುತ್ತವೆ

ಎಂದು ಹೇಳುತ್ತಾರೆ. ಪ್ರತಿವಾದಿಗೆ ಯಾವುದೇ 2 ನೇ ಮದುವೆ ಆಗಿರುವುದಿಲ್ಲ ಅವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯ 1 ನೇ ಮಗುವಿನ ಹೆಸರು ನನಗೆ ಗೊತ್ತಿಲ್ಲ. 1 ನೇ ಮಗು ಸಾಯುವಾಗ 5-6 ವರ್ಷದವನಿದ್ದನು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದ್ದಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
**ಆಳಂದ.**